# ಆನ್‌ಲೈನ್ ಹರಟೆಗೆ ಅರಟ್ಟೈ ಎಂಟ್ರಿ

**ಆನ್‌ಲೈನ್ ಹರಟೆಗೆ ಸ್ವದೇಶಿ ಆ್ಯಪ್ ಎಂಟ್ರಿಯಾಗಿದೆ. ಕೇಂದ್ರ ಸರ್ಕಾರದ ಮಟ್ಟದಲ್ಲೇ ಈ ಆ್ಯಪ್‌ಗೆ ಪ್ರಚಾರ ಸಿಗುತ್ತಿದ್ದು, ತ್ವರಿತ ಸಮಯದಲ್ಲಿ ಹೆಚ್ಚಿನ ಜನರು ಈ ಆ್ಯಪ್‌ನತ್ತ ಮುಖಮಾಡಿದ್ದಾರೆ. ದೇಶಿಯ ಮಟ್ಟದಲ್ಲಿ ಪ್ರಬಲ ಮೆಸೇಜಿಂಗ್ ಆ್ಯಪ್ ಆಗಿ ರೂಪುಗೊಳ್ಳುತ್ತಿದೆ.**

■ **ಶಶಿಕುಮಾರ್ ಸಿ.**

ವಾಟ್ಸ್‌ಆ್ಯಪ್ ಒಂದು ಕಾಲದಲ್ಲಿ ಜನಪ್ರಿಯಗೊಂಡಿದ್ದೇ ಅದರ ಸುಲಲಿತ ಬಳಕೆ ಹಾಗೂ ಜಾಹೀರಾತು ಮುಕ್ತ ವಿಧಾನಕ್ಕೆ. ಇದೇ ಮಾದರಿಯೊಂದಿಗೆ ಸ್ವದೇಶಿ ಆ್ಯಪ್ ‘ಅರಟ್ಟೈ’ ಆನ್‌ಲೈನ್ ಹರಟೆಗೆ ವೇದಿಕೆ ಒದಗಿಸುತ್ತಿದೆ. ಮೆಸೇಜಿಂಗ್ ಆ್ಯಪ್‌ಗಳ ಕ್ಷೇತ್ರದಲ್ಲಿ ಹೆಚ್ಚು ಪ್ರಾಬಲ್ಯ ಹೊಂದಿರುವ ವಾಟ್ಸ್‌ಆ್ಯಪ್‌ಗೆ ದೇಶದಲ್ಲಿ ಪ್ರಬಲ ಪೈಪೋಟಿ ನೀಡುವ ಭರವಸೆಯನ್ನೂ ಮೂಡಿಸಿದೆ.



‘ಅರಟ್ಟೈ’ ಸಂಪೂರ್ಣ ದೇಸಿಯ ಆ್ಯಪ್. ಭಾರತದಲ್ಲಿ ಅಭಿವೃದ್ಧಿಪಡಿಸಿದ ಮತ್ತು ಇಲ್ಲಿಂದಲೇ ಸಂಪೂರ್ಣವಾಗಿ ನಿರ್ವಹಿಸುವ ಈ ಮೆಸೇಜಿಂಗ್ ಅಪ್ಲಿಕೇಷನ್ ಬಳಕೆ ಅತ್ಯಂತ ಸರಳ. ಸುರಕ್ಷಿತ ವಿನ್ಯಾಸ ಹಾಗೂ ಸುಲಭ ಬಳಕೆಯ ವಿಧಾನಕ್ಕೆ ಹೆಚ್ಚು ಚರ್ಚೆಯಲ್ಲಿದೆ. ಆನ್‌ಲೈನ್ ಮೂಲಕ ತಮ್ಮ ಅತ್ಯಾಪ್ತರೊಂದಿಗೆ ನಿರಂತರ ಸಂಪರ್ಕಕ್ಕೆ ವಿಶ್ವಾಸಾರ್ಹ ಪ್ಲಾಟ್‌ಫಾರ್ಮ್ ಆಗಿ ರೂಪುಗೊಂಡಿದೆ.

ಮೂಲತಃ, ಅರಟ್ಟೈ ಎಂಬುದು ಜೊಹೊ (ZOHO) ಕಾರ್ಪೊರೇಷನ್ ನಿರ್ಮಿಸಿದ ಕ್ರಾಸ್‌ಪ್ಲಾಟ್‌ಫಾರ್ಮ್. ತ್ವರಿತ ಸಂದೇಶ ಹಾಗೂ ಸಂವಾದಕ್ಕೆ (ಇನ್‌ಸ್ಟಂಟ್ ಮೆಸೇಜಿಂಗ್ ಮತ್ತು ವಾಯ್ಸ್ ಓವರ್ ಐಪಿ) ಅಪ್ಲಿಕೇಶನ್ ಆಗಿದೆ. ಇದು ಉಚಿತವಾಗಿದ್ದು, ವ್ಯಾಪಕ ಬಳಕೆಯಲ್ಲಿರುವ ವಾಟ್ಸ್‌ಆ್ಯಪ್‌ಗೆ ಸೆಡ್ಡು ಹೊಡೆಯುತ್ತಿದೆ. ಈ ಅಪ್ಲಿಕೇಶನ್ ಮೂಲಕ ಬಳಕೆದಾರರು ಟೆಕ್ಸ್ಟ್ ಸಂದೇಶಗಳು, ವಾಯ್ಸ್ ನೋಟ್‌ಗಳು, ಆಡಿಯೊ ಕರೆಗಳು ಮತ್ತು ವಿಡಿಯೊ ಕರೆಗಳನ್ನು ಮಾಡಬಹುದು. ಜೊತೆಗೆ, ಫೋಟೊಗಳು, ವಿವಿಧ ರೀತಿಯ ಫೈಲ್‌ಗಳು ಮತ್ತು ವಿಡಿಯೊಗಳನ್ನು ಸಹ ಅತಿ ಸುಲಭವಾಗಿ ಹಂಚಿಕೊಳ್ಳಬಹುದು. ಅಪ್ಲಿಕೇಶನ್ ಬಳಕೆ ಪ್ರಾರಂಭಿಸಲು ಬಳಕೆದಾರರು ತಮ್ಮ ಮೊಬೈಲ್ ಫೋನ್ ನಂಬರ್ ನೀಡುವುದು ಮಾತ್ರ ಸಾಕು.

ಡೇಟಾ ಗೌಪ್ಯತೆ ಮತ್ತು ಸುರಕ್ಷತೆಯು ಅತ್ಯಂತ ಮಹತ್ವದ್ದು. ಈ ವಿಷಯದಲ್ಲಿ ಅರಟ್ಟೈ ತುಂಬಾ ವಿಶ್ವಾಸಾರ್ಹವೆನ್ನಬಹುದು. ಇದನ್ನು ರಚಿಸಿದ ಜೊಹೊ ಕಾರ್ಪೊರೇಷನ್ ಎಂಟರ್‌ಪ್ರೈಸ್‌ಗೆ ಅಂತರರಾಷ್ಟ್ರೀಯ ಮಟ್ಟದ ಸಾಫ್ಟ್‌ವೇರ್ ಅಪ್ಲಿಕೇಶನ್‌ಗಳನ್ನು ನಿರ್ಮಿಸುವಲ್ಲಿ ನುರಿತ ಅನುಭವ ಹೊಂದಿದೆ. ಬಳಕೆದಾರರ ಗೌಪ್ಯತೆಯ ವಿಚಾರವಾಗಿ ಬಲವಾದ ನಂಬಿಕೆ ಮತ್ತು ಬದ್ಧತೆಯನ್ನು ಕಂಪನಿ ಹೊಂದಿದೆ. ಬಳಕೆದಾರರ ಎಲ್ಲಾ ವೈಯಕ್ತಿಕ ಮಾಹಿತಿ ಮತ್ತು ಡೇಟಾವನ್ನು ಅತ್ಯಾಧುನಿಕ ಭದ್ರತಾ ವ್ಯವಸ್ಥೆಯಿಂದ ಸುರಕ್ಷಿತವಾಗಿ ಸಂಗ್ರಹಿಸಲಾಗುತ್ತದೆ ಎಂಬುದನ್ನು ಕಂಪನಿಯು ತನ್ನ ಪ್ರಕಟಣೆಯಲ್ಲಿ ಹೇಳಿದೆ.

### ಅರಟ್ಟೈ ಅರ್ಥವೇನು?

ಅರಟ್ಟೈ ಎನ್ನುವುದು ತಮಿಳು ಪದ. ಇದನ್ನು ಇಂಗ್ಲಿಷ್‌ನಲ್ಲಿ ‘ಕ್ಯಾಶುವಲ್ ಚಾಟ್’ ಎನ್ನಬಹುದು. ಇನ್ನು ಅರಟ್ಟೈ ಪದವು ಕನ್ನಡದ ಹರಟೆ ಪದಕ್ಕೆ ಸಾಮ್ಯತೆಯನ್ನು ಹೊಂದಿದ್ದು, ಈ ಹಿನ್ನಲೆಯಲ್ಲಿ ಕಂಪನಿಯು ಈ ಹೆಸರನ್ನು ಇಟ್ಟಿದೆ. ದೈನಂದಿನ ಬಳಕೆಗಾಗಿ ಈ ಆ್ಯಪ್ ರೂಪಿಸಲಾಗಿದೆ ಎಂಬುದನ್ನು ಹೆಸರೇ ಸೂಚಿಸುವಂತಿದೆ.

### ಸುರಕ್ಷೆಯೇ ಮೊದಲ ಆದ್ಯತೆ

ಅರಟ್ಟೈ ಮೂಲಕ ನಡೆಯುವ ಸಂವಾದಗಳು ಮತ್ತು ಕರೆಗಳು ಎಂಡ್ ಟು ಎಂಡ್ (End–to–End) ಎನ್‌ಕ್ರಿಪ್ಷನ್ ಆಗಿದ್ದು, ಸೋರಿಕೆಯಾಗುವುದನ್ನು ಇದು ತಡೆಗಟ್ಟುತ್ತದೆ. ಬಳಕೆದಾರರು ಕಳುಹಿಸುವ ಪಠ್ಯ ಸಂದೇಶಗಳು, ಆಡಿಯೊ ಕರೆಗಳು, ವಿಡಿಯೊ ಕರೆಗಳು ಮತ್ತು ಹಂಚಿಕೊಳ್ಳುವ ಯಾವುದೇ ಮಾಧ್ಯಮ ಫೈಲ್‌ಗಳು, ಕಳುಹಿಸುವವರಿಂದ ಪಡೆಯುವವರೆಗೂ ಎನ್‌ಕ್ರಿಪ್ಟೆಡ್ ಆಗಿರುತ್ತವೆ.

ಎನ್‌ಕ್ರಿಪ್ಟ್ ಎಂದರೆ ಗೂಢಲಿಪೀಕರಣ. ಇವುಗಳನ್ನು ಡಿಕೋಡ್ ಮಾಡಲು ಸಾಧ್ಯವಿಲ್ಲ ಎನ್ನುವುದು ಕಂಪನಿಯ ಅಭಿಪ್ರಾಯ. ಎನ್‌ಕ್ರಿಪ್ಟ್ ವಿಧಾನದ ಹಾದಿಯಲ್ಲಿ ಯಾರೂ ಈ ಮಾಹಿತಿಯನ್ನು ಓದಲು ಅಥವಾ ಅದನ್ನು ಇಂಟರ್‌ಸೆಪ್ಟ್ ಮಾಡಲು ಸಾಧ್ಯವಿಲ್ಲ. ‘ಸೀಕ್ರೆಟ್ ಚಾಟ್’ ಎಂಬ ವಿಶೇಷ ಫೀಚರ್ ಅನ್ನು ಅರಟ್ಟೈ ಪರಿಚಯಿಸಿದೆ. ಇದು ಹೆಚ್ಚಿನ ಮಟ್ಟದ ಗೌಪ್ಯತೆ ಬಯಸುವ ಬಳಕೆದಾರರಿಗೆ ನೆರವಾಗುತ್ತದೆ. ಇದೂ ಸಹ ಎಂಡ್ ಟು ಎಂಡ್ ಎನ್‌ಕ್ರಿಪ್ಷನ್‌ಗೆ ಒಳಪಡುತ್ತದೆ. ವಾಟ್ಸ್‌ಆ್ಯಪ್‌ನಲ್ಲಿರುವಂತೆ ಚಾನಲ್, ಸ್ಟೋರೀಸ್, ಮೀಟಿಂಗ್‌ನಂತಹ ವಿಶೇಷ ಫೀಚರ್‌ಗಳು ಇದರಲ್ಲಿ ಲಭ್ಯ. ಡೆಸ್ಕ್‌ಟಾಪ್ ಆವೃತ್ತಿಯೂ ಇದರಲ್ಲಿ ಲಭ್ಯವಿದ್ದು, ಟೆಕ್ಸ್ಟ್ ಅನ್ನು ಇನ್ನಷ್ಟು ಆಪ್ತವಾಗಿಸುವ ಸಲುವಾಗಿ ಇಮೋಟಿ ಹೆಸರಿನಲ್ಲಿ ಇಮೋಜಿಗಳನ್ನು ಪರಿಚಯಿಸಿದೆ. ಜೊತೆಗೆ ಈ ಆ್ಯಪ್ ಇಂಗ್ಲಿಷ್, ಹಿಂದಿ, ತಮಿಳು, ಮಲೆಯಾಳಂ, ಕನ್ನಡ ಹಾಗೂ ಇನ್ನಿತರ ದೇಸೀಯ ಭಾಷೆಗಳಲ್ಲಿ ಲಭ್ಯವಿದ್ದು, ಬಳಕೆದಾರರು ತಮ್ಮ ಅಗತ್ಯಕ್ಕನುಗುಣವಾಗಿ ಬಳಸಬಹುದು. ಆ್ಯಂಡ್ರಾಯ್ಡ್ ಹಾಗೂ ಐಒಎಸ್ ಎರಡೂ ಮಾದರಿಯಲ್ಲಿ ಇದು ಲಭ್ಯ.

### ಪ್ರಚಾರಕ್ಕೆ ನಿಂತ ಕೇಂದ್ರ ಸರ್ಕಾರ

‘ಜೊಹೊ ಅಭಿವೃದ್ಧಿಪಡಿಸಿದ ಅರಟ್ಟೈ ಇನ್‌ಸ್ಟಂಟ್ ಮೆಸೇಜಿಂಗ್ ಆಪ್ ಉಚಿತ, ಬಳಸಲು ಸುಲಭ, ಸುರಕ್ಷಿತ ಮತ್ತು ‘ಭಾರತದಲ್ಲಿ ತಯಾರಿಸಲ್ಪಟ್ಟಿದೆ’ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ನಂತರ ಕೇಂದ್ರ ಸರ್ಕಾರದ ಹಲವು ಪ್ರಮುಖರು ಈ ಆ್ಯಪ್ ಬಗ್ಗೆ ಮಾತನಾಡುತ್ತಿದ್ದಾರೆ. ‘ಪ್ರಧಾನಿ ನರೇಂದ್ರ ಮೋದಿ ಅವರ ಸ್ವದೇಶಿ ನಿಲುವಿಗೆ ತಕ್ಕಂತೆ ಸ್ನೇಹಿತರು ಮತ್ತು ಕುಟುಂಬದೊಂದಿಗೆ ಸಂಪರ್ಕದಲ್ಲಿರಲು ಭಾರತ ನಿರ್ಮಿತ ಆ್ಯಪ್‌ಗಳತ್ತ ಗಮನ ಹರಿಸಲು ಎಲ್ಲರಿಗೂ ಮನವಿ ಮಾಡುತ್ತೇನೆ’ ಎಂದಿದ್ದಾರೆ. ಇದೆಲ್ಲವೂ ಈ ಆ್ಯಪ್‌ನ ಬೆಂಬಲಕ್ಕೆ ಕೇಂದ್ರ ಸರ್ಕಾರ ನಿಂತಿದೆ ಎನ್ನುವುದನ್ನು ಪರೋಕ್ಷವಾಗಿ ತೋರುತ್ತದೆ. ■